## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1133
2. ಸದಸ್ಯರ ಹೆಸರು : ಶ್ರೀ ಎಸ್ ಎಲ್. ಭೋಜೇಗೌಡ
3. ಉತ್ತರಿಸಬೇಕಾದ ದಿನಾಂಕ : 22-09-2022.
4. ಉತ್ತರಿಸುವ ಸಚಿವರು : ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ 2022 ನೇ ಸಾಲಿನಲ್ಲಿ ಹೆಚ್ಚು ಮಳೆ ಬಿದ್ದು, ಕೆರೆ ಕಟ್ಟೆಗಳು ತುಂಬಾ ಹಾನಿಯಾಗಿರುವುದರಿಂದ ಇವುಗಳ ಅಭಿವೃದ್ಧಿಗೆ ಸರ್ಕಾರ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಕ್ರಮ ಕೈಗೊಳ್ಳಲಾಗಿದೆ; | 2022ನೇ ಸಾಲಿನಲ್ಲಿ ಹೆಚ್ಚು ಮಳೆಯಾಗಿರುವ ಕಾರಣ, ಸಣ್ಣ ನೀರಾವರಿ ಇಲಾಖೆ ಅಡಿಯಲ್ಲಿ ಕೆರೆಗಳು ಸೇರಿದಂತೆ ಒಟ್ಟು (1001+550) 1551 ಸಣ್ಣ ನೀರಾವರಿ ಯೋಜನೆಗಳಿಗೆ ಹಾನಿಯಾಗಿರುತ್ತದೆ. ಸದರಿ ಯೋಜನೆಗಳ ಪರಿವೀಕ್ಷಣೆ ಮಾಡಿ ಹಾನಿಯಾದ ಸ್ವರೂಪಕ್ಕೆ ತಕ್ಕಂತೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು. |
| ಆ) | ರಾಜ್ಯದಲ್ಲಿ ಈ ಮಳೆಯಿಂದ ದುರಸ್ಥಿಯಲ್ಲಿರುವ ಕೆರೆ ಕಟ್ಟೆಗಳ ಅಭಿವೃದ್ಧಿ, ರಸ್ತೆಗಳ ಅಭಿವೃದ್ಧಿ ಇನ್ನೂ ಮುಂತಾದ ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆಯಿಂದ ಅಭಿವೃದ್ಧಿ ಪಡಿಸಲು ಸರ್ಕಾರ ಎಷ್ಟು ಹಣವನ್ನು ಮಂಜೂರು ಮಾಡಿದೆ; ಇನ್ನೂ ಬಾಕಿ ಇರುವ ಕಾಮಗಾರಿಗಳಿಗೆ ಯಾವ ಕಾಲಮಿತಿಯೊಳಗೆ ಹಣವನ್ನು ಮಂಜೂರು ಮಾಡಲಾಗುವುದು? | ಸದರಿ ಯೋಜನೆಗಳ ದುರಸ್ತಿಗೆ ಅನುದಾನದ ಲಭ್ಯತೆ ಹಾಗೂ ಅವಶ್ಯವಿರುವ ಕಡೆ ಅನುದಾನ ಮಂಜೂರು ಮಾಡುವ ಕುರಿತು ಕ್ರಮ ಕೈಗೊಳ್ಳಲಾಗುವುದು. |

**ಕಡತ ಸಂಖ್ಯೆ: ಎಂಐಡಿ 132 ಎಲ್‌ಸಿಕ್ಯೂ 2022**

**(ಜೆ.ಸಿ ಮಾಧುಸ್ವಾಮಿ)**
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.